Regd No B G 155

ಸತ್ಯವಾದಿ

14—10—195

49th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯಪುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಕಾಶ್ಮೀರ ವಿಚಾರದಲ್ಲಿ ಭಾರತಕ್ಕೆ ಇತೋಪಿಯಾದ ಬೆಂಬಲ

❋

ಅಡಿಸ್ ಅಬಾಬಾ— ಭಾರತ-ಪಾಕಿಸ್ತಾನ ಯುದ್ಧದಲ್ಲಿ, ಕಾಶ್ಮೀರ ವಿಷಯದಲ್ಲಿ, ಚೀನಾ-ಭಾರತ ವ್ಯಾಜ್ಯದಲ್ಲಿ ಭಾರತಕ್ಕೆ ತನ್ನ ಪೂರ್ಣ ಬೆಂಬಲ ಕೊಡುವುದಾಗಿ ಇತೋಪಿಯಾ ಚಕ್ರವರ್ತಿ ಹೈಲಿ ಸೆಲಾಸಿಯಾ ಘೋಷಿಸಿದರು.

80 ಪಾಕಿಸ್ತಾನಿ ಸೈನಿಕರ ಸಾವು

ನವದೆಹಲಿ— ಕಾಶ್ಮೀರದ ಟಿಟವಾಲ ಸೆಕ್ಟರಿನಲ್ಲಿ ತಾಂಗಧರಕ್ಕೆ ವಾಯುವ್ಯದಲ್ಲಿ ದೊಡ್ಡ ಸಶಸ್ತ್ರ ಪಾಕಿಸ್ತಾನಿ ಬೆಟಾಲಿಯನ್ನು ನುಗ್ಗಿ ಬಂದು ನಮ್ಮ ಸೈನಿಕರು ಕಾದಾಡಿ ಹಿಂದಟ್ಟಿದರು; ಈ ಸಂದರ್ಭದಲ್ಲಿ 80 ಪಾಕಿಸ್ತಾನಿಗರ ಹೆಣ ಬಿದ್ದವು.

❋

ಫೀಜೋ ನಿಧಾನ

ನವದೆಹಲಿ— ಲಂಡನ್ನಿನಲ್ಲಿ ನಾಗಾ ನಾಯಕ ಫೀಜೋ ಜೊತೆಯಲ್ಲಿ ನಡೆಸಿದ ಶಾಂತಿ ನಿಯೋಗ ಪ್ರಯತ್ನ ಸಫಲವಾಗದೆ ಮಾತುಕತೆ ನಡೆಯುವುದು ಸರ್ಕಾರದ ಇಚ್ಛೆಯಿಲ್ಲ: ಆದರೆ ನಾಗಾ ಸಮಸ್ಯೆ ಪರಿಹಾರವಾಗಬೇಕೆಂದಿದ್ದರೆ ಜಯಪ್ರಕಾಶ ನಾರಾಯಣರಂಥವರನ್ನು ಮುಖ್ಯಮಂತ್ರಿ ಶಿಲಿಯಾಂಗ್‌ಗೆ ಹೋಗಿ ಮಾತುಕತೆಯಾಡಲಿ ಎಂದು ಹೇಳಲಾಗಿದೆ.

❋

ಪಟಾಕಿ ಪಟಾಸು ವಿರುದ್ಧ ನಿಷೇಧಾಜ್ಞೆ

ಮೈಸೂರು— ಸಾರ್ವಜನಿಕ ಸುರಕ್ಷತೆ ದೃಷ್ಟಿಯಿಂದ ಮೈಸೂರು ನಗರದ ಪುರಸಭೆಯ ಸಂಪದ್ಭಿನ ಅಥವಾ ಜಿಲ್ಲೆಯ ಸಾರ್ವಜನಿಕ ಸ್ಥಳಗಳಲ್ಲಿ ಪಟಾಕಿ ಮುಂತಾದ ಎಲ್ಲ ರೀತಿಯ ಅಸ್ಫೋಟಕ ವಸ್ತುಗಳ ಸಿಡಿಮದ್ದಿನ ಕೆಲಸವನ್ನು ನಿಷೇಧಿಸಿ ಮೈಸೂರಿನ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಜಿಲ್ಲಾಧಿಕಾರಿ ಶ್ರೀ ವಾಸುದೇವ ರಾವ್ ರವರು ಆಜ್ಞೆಯೊಂದನ್ನು ಹೊರಡಿಸಿದ್ದಾರೆ: ಈ ಆಜ್ಞೆಯು ಮೊನ್ನೆಯಿಂದ ದ ಎಂಡು ತಿಂಗಳ ಜಾರಿಯಲ್ಲಿರುವುದು. ಆಜ್ಞೆಯನ್ನು ಉಲ್ಲಂಘಿಸಿದವರನ್ನು ತಿಳಿಗೆ ಗುರಿಪಡಿಸಲಾಗುವುದು.

★

ಪೂರ್ಣ ಗುಣವಾಗದಿವ್ವಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪೂರ್ಣ ಗುಣ ನಿಶ್ಚಿತ್ತಕ್ಕೆ ಖಾತರಿಯಾದ ಗುಣ. ಜೀವನದಲ್ಲಿಯೇ ಮೊಟ್ಟಮೊದಲ ಭಾರಿಸಂವರು ಮತ್ತು ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ॥ ಮೋತಿಯವರ ಸಲಹೆ ಪಡೆಯಿರಿ.

ಇವರು ನರಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯರ ಬಿಳಿ ಸ್ರಾವದ ತೊಂದರೆ ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣಪಡಿಸುವರು

ಜನತಾ ಡಿಸ್ಪೆನ್ಸರಿ

ಪ್ರತಿದಿನವೂ ಸಲಹೆ ಕಾಲ — ಬೆಳಿಗ್ಗೆ 10 ರಿಂದ 1, ಸಂಜೆ 4 ರಿಂದ 8

ಹೆಡ್ ಆಫೀಸ್:
ಸುಬೇದಾರ್ ಚಕ್ರಂ ರೋಡ್
ಬೆಂಗಳೂರು 9 : ಫೋನ್ ನಂಬ್ರ 75332.

ರಾಷ್ಟ್ರೀಯ ಲಕ್ಷ್ಮಣ ನಿಧಿಗೆ ಮೈಸೂರು ಕೊಆಪರೇಟಿವ್ ಸೊಸೈಟಿ ರೂ 1501 ಕೊಟ್ಟಿದೆ

ಮೈಸೂರು ಕೊಆಪರೇಟಿವ್ ಸೊಸೈಟಿ ಆ॥ ತಾ॥ 10 ರಂದು ನಡೆದ ವ್ಯಾನೇಜಿಂಗ್ ಕಮಿಟಿ ಎಮರ್ಜೆನ್ಸಿಯಲ್ಲಿ, ರಾಷ್ಟ್ರೀಯ ಲಕ್ಷ್ಮಣ ನಿಧಿಗೆ ರೂ 1501 ಧನಸಹಾಯ ಕೊಡಲು ನಿರ್ಣಯ ಮಾಡಲಾಯಿತೆಂದೂ ಅದರಂತೆ ಸೊಸೈಟಿ ಅಧ್ಯಕ್ಷರಾದ ಶ್ರೀ ಬಿ ಎಸ್ ಕೆಂಗೇಗೌಡರು 1501 ರೂಗಳ ಚೆಕ್ಕನ್ನು ಖುದ್ದಾಗಿ ಜಿಲ್ಲಾಧಿಕಾರಿ ಶ್ರೀ ವಾಸುದೇವಪ್ಪನವರಿಗೆ ಕೊಟ್ಟರೆಂದೂ ಸೊಸೈಟಿ ಸೆಕ್ರೆಟರಿಯವರು ತಿಳಿಸಿದರೆ

★

ರೂ

ನವದೆಹಲಿ— ಅವೇಕರಿಕಾಕ್ಕೆ ಭಾರತದಿಂದ ರೂ 150 ಕೋಟಿ ಮೌಲ್ಯದಷ್ಟು ರೂ ಮುದ್ರಿಸಿದ್ದುದು ವಿಶೇಷ ರೂ 20 ಕೋಟಿ ಹೆಚ್ಚಳವಾಗಿದೆ; ಕಾರಣ ನ್ಯೂಯಾರ್ಕ್ ವಿಶ್ವಸಂತೆಯು ಆ॥ 17 ರಿಂದ ಪ್ರಾರಂಭವಾಗಲಿರುವುದು.

★

ಗಡಿಯಾರಗಳು ನಿಂತಿವೆ

ಬೆಂಗಳೂರು— ಅಫ್ಘಾನುಗಳಲ್ಲಿ ವಿದ್ಯುಚ್ಛಕ್ತಿ ಗೋಪುರ ಗಡಿಯಾರಗಳು ಅವುಗಳಲ್ಲಿನ ಲಕ್ಷಾಂತರ ಬ್ಯಾಟರಿಗಳ ಜೀವ ಮುಗಿದಿವೆ: ಶಾಸನಸಭೆಯಲ್ಲಿ ಎಂಡು ಬದಲಾಯಿಸಲ್ಪಟ್ಟವು.

★

ತಿರುಪತಿ — ಪಲಕಾಯಿಯಲ್ಲಿ ಒಂದು ಖಾಸಗಿ ಬಸ್ಸು ತೆಂಗಿನ ಕಾಯಿಡಕ್ಕೆ ಬಡಿದು 8 ಮಂದಿ ಗಾಯಗೊಂಡರು

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನ ವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ ಜ್ಯೋತಿರ್ವಿದ್ಯನ್ಮಣಿ
ಸುಪಶ್ಯ ಕೃಷ್ಣಜೋಯಿ ಸಂವರಿಂದ

15 ಶುಕ್ರವಾರ ಪಂಚಮಿ ವೈಗಶಿ

ಭಾಷಾ ವಿಚಾರ

ಬೆಂಗಳೂರು— ಕೆಲವು ಸರ್ಕಾರಿ ಪ್ರಕಾಶನಗಳು ಇಂಗ್ಲೀಷು ಮತ್ತು ಕನ್ನಡದಲ್ಲಿ ವಿಷಯವಿದ್ದು ವಿರೋಧವಿಲ್ಲವೂ ಇಂದೀಕಾಗಿದ್ದೆತೊಡು ಶಾಸನಸಭೆಯಲ್ಲಿ ಒಬ್ಬ ಸದಸ್ಯರು ವಾಗ್ವಾದ ಮಾಡಿದರು

❋

ಸಂಕದ ಕಟ್ಟೆ ಸ್ವಾರಸ್ಯ

ತುಮಕೂರು— ಎಂಡು ಅಕ್ಕಾಯಿ ರಸೀತಿ ಪುಸ್ತಕಗಳು ನಾಪತ್ತೆಯಾಗಿವೆಯೆಂದೂ 64 ನೇ ಇಸವಿ ಅಕ್ಟೋಬರು 1 ರಿಂದ ನವೆಂಬರ್ 2 ರವರೆಗೆ ರೂ 400 ಕಡಮೆ ಬಂದಿದೆಯೆಂದೂ ಪೌರ ಸಭೆಯಲ್ಲಿ ಚೀಫ್ ಆಫೀಸರ್ ತಿಳಿಸಿದರು

★

ಅರ್ಧ ಗಂಟೆ ಮುಷ್ಕರ

ಬೆಂಗಳೂರು— ಒಬ್ಬ ಆಟೋರಿಕ್ಷಾ ಡ್ರೈವರನ್ನು ಸರ್ಕಲ್ ಇನ್ಸ್‌ಪೆಕ್ಟರ್ ಹೊಡೆದರೆಂದು ವದಂತಿ ಹಬ್ಬಿ ಅರ್ಧ ಗಂಟೆ ಕಾಲ ಟ್ಯಾಕ್ಸಿಗಳೂ ಆಟೋರಿಕ್ಷಾಗಳೂ ಓಡಾಟ ನಿಲ್ಲಿಸಿದ್ದವು.

★

ಮಗು ಮಾಯವಾಗಿದೆ

ಪೂನಾ— ಎಡ್ವರ್ಡ್ ಆಸ್ಪತ್ರೆಯಿಂದ 5 ದಿನಗಳ ಹೆಣ್ಣು ಮಗುವು ಶನಿವಾರ ಮಾಯವಾಗಿದೆ: ನರ್ಸ್ ಉಡಿಸಿನ ಹೆಂಗಸೊಬ್ಬಳು ತೆಗೆದುಕೊಂಡು ಹೋದಂತೆ ವದ್ದಿ: ಮಹಾರಾಷ್ಟ್ರದ ಎಲ್ಲ ಕಡೆಗೂ ಪೂನಾ ಪೊಲೀಸರು ಎಚ್ಚರಿಕೆ ಇತ್ತಿರುವರು.

★

ಮೋಸ

ಬೆಂಗಳೂರು— ವಿಶ್ವೇಶ್ವರದಲ್ಲಿ ಒಬ್ಬಂ ವನಿಗೆ ಒಬ್ಬ ಅಗಂತುಕನು ಬಂದು ಅವರಿಗೆ ತುಮಕೂರಿನಿಂದ ಲಕ್ಕೀ ಬಂದಿದೆಯೆಂದೂ ರೂ 250 ಬೇಕೆಂದೂ ಹೇಳಲು ಮನೆಯ ಯಜಮಾನಿಯು ತನ್ನ ಮಗನ ಕೈಲಿ ರೂ 250 ಕೊಟ್ಟು ಕಳುಹಿಸಿದಳು; ಸ್ವಲ್ಪ ದೂರ ಹೋದನೆಂಲೆ ಅಗಂತುಕನು ಹಣವನ್ನು ಕಿತ್ತುಕೊಂಡು ಪರಾರಿಯಾದನು; ತನಿಖೆ ನಡೆಯುತ್ತಿದೆ

ವಿದ್ಯಾಕೇಂದ್ರ ನಾಲಂದಾ

★

– ಶ್ರೀ ಎಂ ಎಸ್ ನರಸಿಂಹಭಟ್ಟ, ವಂಜೀಶ್ವರ –

— ಮುಂದಿನ ಸಂಚಿಕೆಯಲ್ಲಿ ಮುಂದುವರಿದು —

ಇಲ್ಲಿಯ ಅರು ಬುದ್ಧ ವಿಹಾರಗಳನ್ನು — ಶಕ್ರಾದಿತ್ಯ ಬುದ್ಧಗುಪ್ತ, ತಥಾಗತ ಗುಪ್ತ, ಬಾಲಾದಿತ್ಯ, ವಿಷ್ಣು ಮತ್ತು ಇನ್ನೊಬ್ಬ (ಹೆಸರು ಗೊತ್ತಾಗಲಿಲ್ಲ) ರಾಜ ಹೀಗೆ ಅರು ರಾಜರು ಕಟ್ಟಿಸಿಕೊಟ್ಟಿದ್ದರೆಂದು ಹ್ಯುಯನ್ತ್ಸಾಂಗನು ಬರೆದಿದ್ದಾನೆ ; ಶಕ್ರಾದಿತ್ಯನು ಬುದ್ಧನ ಪರಿನಿರ್ವಾಣದ ಕೆಲವೇ ಸಮಯದೊಳಗಾಗಿ ಸಂಗಾರಾಮವನ್ನು ಕಟ್ಟಿಸಿ ವಿದ್ಯಾಲಯಕ್ಕೆ ದಾನಕೊಟ್ಟನು.

ಡಾ || ಜೋಶಿಯವರು ತಮ್ಮ ' ಬುದ್ಧಿಸ್ಟ್ ಇಂಡಿಯಾ ' ದಲ್ಲಿ ' ಈ ವಿಶ್ವವಿದ್ಯಾಲಯ ಪಟ್ಟಣವು ವಿಶ್ವದಲ್ಲಿ ಒಂದು ವಿದ್ಯೆಗೆ ಅತಿ ಅದ್ಭುತ ವಸ್ತು ಪ್ರಖ್ಯಾತ ಸ್ಥಾನವಾಗಿತ್ತೆಂದು ' ಒರೆದಿದ್ದಾರೆ ; ದೊಡ್ಡದೊಡ್ಡ ಜೈತಕ್ಕಲಯಗಳೂ ದೇವಾಲಯಗಳೂ ಪರದೇಶದ ವಿದ್ಯಾರ್ಥಿಗಳ ಉಳಿದುಕೊಳ್ಳಲು ಹಾಸ್ಟಲ್‌ಗಳೂ ಉತ್ತಮ ರೀತಿಯಿಂದ ಇದ್ದವು : ಅಲ್ಲದೆ ಪರದೇಶಗಳಿಂದ ಬಂದ ವಿದ್ಯಾರ್ಥಿಗಳಿಗಾಗಿ ಊಟೋಪಚಾರಗಳೆಲ್ಲವೂ ಇಲ್ಲಿ ಧರ್ಮಾರ್ಥವಾಗಿ ಆಗುತ್ತಿತ್ತಲ್ಲದೆ ಅವರ ದೇಶಕ್ಕನ್ನು ಸರಿಸಿ ನಡೆಯುತ್ತಿತ್ತು ; ಆದರೆ ಪ್ರವಾಸಾಹಾರವು ಮಾತ್ರ ನಿಶೇಧವಲ್ಲದ್ದಿತ್ತು : ಜಗತ್ತಿನ ಎಲ್ಲಾ ದೇಶಗಳಿಂದಲೂ ಇಲ್ಲಿಗೆ ವಿದ್ಯಾರ್ಥಿಗಳು ಬಂದು ಅಧ್ಯಯನ ಮಾಡುತ್ತಿದ್ದರು : ವಿಶ್ವವಿದ್ಯಾಲಯದ ಸೇವೆಯೂ ಪ್ರಾಕಾರವಿದ್ದು, ಮೂರು ದೊಡ್ಡದಾದ ಹೆಬ್ಬಾಗಿಲುಗಳಿದ್ದವು ; ಒಂದರಿಂದ ಉಪಾಧ್ಯಾಯರು ಮಾತ್ರ ಹೋಗುತ್ತಿದ್ದರು

ಶ್ರೀಮತಿ ಜೆ ಹೆಚ್ ದಾವೆಯವರು ತಮ್ಮ ಪುಸ್ತಕದಲ್ಲಿ ' ನಾಲಂದಾದಲ್ಲಿ ಭೂಗರ್ಭಶೋಧನೆಯಲ್ಲಿ – ದಕ್ಷಿಣದಿಂದ ಉತ್ತರದ ಕಡೆಗೆ ಒಂದು ದೊಡ್ಡ ದೇವಾಲಯವೂ ಮೂರು ಚಿಕ್ಕ ದೇವಾಲಯವೂ ಇರುವುದು ಕಂಡು ಬಂದಿದೆ : ಪ್ರಮುಖ ದೇವಾಲಯವು ಚೌಕಸಿಯ ಕಟ್ಟಡವಾಗಿದ್ದು ದಕ್ಷಿಣದ ಕಡೆಯಲ್ಲಿದೆ : ಅದಕ್ಕೆ ಸೇರಿದಂತೆ ಪಕ್ಕಪಕ್ಕದಲ್ಲಿ ಎಳು ಕಟ್ಟಡಗಳಿದ್ದು ಅವುಗಳಲ್ಲೆಲ್ಲಾ ಬುದ್ಧನ ಪ್ರತಿಮೆ ಪೂಜಿಸಲಾಗಿದೆ ; ಈ ದೇವಾಲಯಗಳಿಗೆ ಪೂರ್ವದಲ್ಲಿ ಕೊಠಡಿಗಳು, ಕಲ್ಲಿನ ಬಾವಣಿಗೆಗಳು, ಮಣ್ಣಿನ ಕಟ್ಟಿಗಳು, ಕಂಬಿನ ವಿಗಹಗಳು, ವಸ್ತುದ ಮುದ್ರೆಗಳು, ಗುಪ್ತ ಮತ್ತು ಅಲ್ಲವ ರಾಜರ ಮುದ್ರೆಗಳು, ಹೇರಳವಾಗಿ ಶಂಬಿದ್ದು, ನಾಲ್ಕು ಮೂಲೆ ಒಳಅಂಗಳದಿಂದಿಂದ ಎಂಟು ಸನ್ಯಾಸಿ ಪ್ರತಿಗಳಿವೆ ' ಎಂದು ಬರೆದಿದ್ದಾರೆ ; ಕುಮಾರಗುಪ್ತ, ಹಿರಿಯ ಭೋಜ, ಮತ್ತು ರಾಜ ಶಶಾಂಕ ಇವರ ನಾಣ್ಯಗಳೂ ಹೇರಳ ಸಿಕ್ಕಿವೆ

Help The Gorakshana

★

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಾಣದಯೆ, ತಕ್ಕುತಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಪೈಸೆ

ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 : (ಒಂದು ಸಾರಿಯೊಪ್ಪತ್ತ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನಪತ್ರವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡಲ್ಯಾಂಡ್ಸ್ ಜನಪ್ರಿಯ 3 ನೇ ವಾರ

ಆವೊ 'ಪ್ಯಾರ್' ಕರೆ (ಹಿಂದಿ)

Aao Pyar Karen

ಜಾಯ್ ಮುಖರ್ಜಿ — ಸೈರಾ ಬಾನು ಇವರ ಕಲಾತ್ಮಕ ನಟನೆ

ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ

ಪ್ರತಿದಿನ 3 ಪ್ರದರ್ಶನಗಳು

ಅಪೆರ— 15–10–65 ರಿಂದ

ಕಲ್ಯಾಣ ಮಂಟಪಂ (ತಮಿಳು)

ನಟವರ್ಗ— ಆನಂದ್, ಆರ್ ವಿಜಯ, ಮನೋಹರ್, ಮಾಲತಿ

ತಾಯಿ ನಾಗೇಶ್, ಮನೋರಮ [ದಿನ 3 ಆಟಗಳು]

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ಪಬ್ಲಿಸಿಟೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳಲ್ಲಿ ಹೆಚ್ಚಿನ ಸಹಾಯ

Edited, Printed & Published by Dharma prachara niratha
M S Krishna Rao (Proprietor) at the Satyavadi Press
Chamarajapuram, Mysore 4